ನಿಸ್ಪೋದನೆ

# ಕ್ರಿಪ್ಟೋಕರೆನ್ಸಿ: ಸರ್ಕಾರದ ಹಂಗಿಲ್ಲದ ಈ ಡಿಜಿಟಲ್ ಹಣದ ಭವಿಷ್ಯವೇನು?

**ಕ್ರಿಪ್ಟೋಕರೆನ್ಸಿಯ ಬಗ್ಗೆ ಪರ ವಿರೋಧ ನೆಲೆಯ ವಾದ ವ್ಯಕ್ತವಾಗಿದೆ. ಅದಕ್ಕೆ ಯಾವುದೇ ವಿಶ್ವಾಸಾರ್ಹತೆ ಇಲ್ಲ. ಸಂಪೂರ್ಣ ನಿಷೇಧಿಸಬೇಕು ಎನ್ನುವ ವಾದ ವಿರೋಧಕ್ಕೆ ಕಾರಣ. ಡಿಜಿಟಲ್ ಯುಗದ ಸಾಧ್ಯತೆಯನ್ನು ಬಳಸಿಕೊಂಡು ಬೆಳೆದಿರುವ ಈ ಹಣಕಾಸು ವ್ಯವಸ್ಥೆಗೆ ಲಗಾಮು ಹಾಕುವ ಅವಶ್ಯಕತೆ ಇಲ್ಲ ಎನ್ನುವುದು ಪರವಾಗಿ ಇರುವವರ ವಾದ. ಹಾಗಾದರೆ ಆ ಬಗ್ಗೆ ಇರುವ ಅರ್ಥ– ಅನರ್ಥವಾದರೂ ಏನು?**



ಅರ್ಥಶಾಸ್ತ್ರದ ಪಿತಾಮಹ ಎನಿಸಿದ ಆ್ಯಡಂ ಸ್ಮಿತ್‌ನ ಕಾಲದಿಂದಲೂ ಸಂಪತ್ತಿನ ಸೃಷ್ಟಿ ಹಾಗೂ ಅದರ ಉಪಭೋಗದ ಕುರಿತು ನಾನಾರೀತಿಯ ಸಿದ್ಧಾಂತಗಳು ಪುಂಖಾನುಪುಂಖವಾಗಿ ಹರಿದುಬರುತ್ತಲೇ ಇವೆ. ಹಾಗೆಯೇ ಸಂಪತ್ತು ಎಂದರೆ ಏನು ಎಂಬುದರ ವ್ಯಾಖ್ಯಾನ ಕೂಡ ಕಾಲಕಾಲಕ್ಕೆ ಬದಲಾಗುತ್ತಲೇ ಬಂದಿದೆ. ಹಿಂದೆ ಈ ಸಂಪತ್ತಿನ ಕ್ರೋಡೀಕರಣವು ಒಡವೆ–ನಗದು ರೂಪದಲ್ಲೇ ಹೆಚ್ಚಾಗಿ ಆಗುತ್ತಿತ್ತು. ನಂತರದ ದಿನಗಳಲ್ಲಿ ಉಳ್ಳವರು ಶೇರು ಬಂಡವಾಳದ ಮೂಲಕ ಉದ್ಯಮಗಳಲ್ಲೂ ತಮ್ಮ ಸಂಪತ್ತನ್ನು ತೊಡಗಿಸಲು ಆರಂಭಿಸಿದರು. ಬರುಬರುತ್ತಾ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಹೂಡಿಕೆ ಮಾಡುವ ಪರಿಪಾಟ ಬೆಳೆಯುತ್ತಾ ಹೋಯಿತು. ಈ ಮಧ್ಯೆ ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಕ್ರಮ ಸಂಪತ್ತಿನ ಗಂಟು ಹೆಚ್ಚಿದಂತೆ ಅದು ‘ಕಪ್ಪು ಹಣ’ವಾಗಿ ಹರಿದಾಡತೊಡಗಿತು. ತನಗೆ ಬೇಕಾದ ‘ಸುರಕ್ಷಿತ ಸ್ಥಳ’ವನ್ನು ಹುಡುಕಿಕೊಳ್ಳತೊಡಗಿತು. ಹೀಗೆ ರೂಪಾಂತರ ಹೊಂದುತ್ತಾ ಬಂದ ಸಂಪತ್ತಿನ ಹೊಸ ಅವತಾರವೇ ಕ್ರಿಪ್ಟೋಕರೆನ್ಸಿ. ಅಂದರೆ ಇದು ಡಿಜಿಟಲ್ ಹಣ!

ಜಗತ್ತಿನ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ಕರೆನ್ಸಿ ಇರುತ್ತದೆ; ನಮ್ಮ ದೇಶದಲ್ಲಿ ರೂಪಾಯಿ ಇದ್ದಂತೆ. ಭಾರತದಲ್ಲಿ ಚಲಾವಣೆಯಲ್ಲಿರುವ ನೋಟುಗಳ ಮೇಲೆ ಉಲ್ಲೇಖಿಸಿದ ಮೌಲ್ಯಕ್ಕೆ ಸರ್ಕಾರದಿಂದಲೇ ಖಾತ್ರಿ ಇರುತ್ತದೆ. ಸ್ವತಃ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆ ಖಾತ್ರಿಯನ್ನು ನೀಡಿ, ಸಹಿ ಹಾಕಿರುವುದನ್ನು ಪ್ರತೀ ನೋಟಿನಲ್ಲೂ ನಾವು ಕಾಣಬಹುದು. ಆದರೆ, ಕ್ರಿಪ್ಟೋಕರೆನ್ಸಿ ಹಾಗಲ್ಲ. ಅದಕ್ಕೆ ದೇಶ–ದೇಶಗಳ ಗಡಿಯ ಹಂಗಿಲ್ಲ. ಯಾವ ಸರ್ಕಾರದ ಅಧೀನಕ್ಕೂ ಅದು ಒಳಪಡುವುದಿಲ್ಲ. ಹೀಗಾಗಿ ಯಾವುದೇ ಖಾತ್ರಿ ಕೂಡ ಈ ಕರೆನ್ಸಿಗೆ ಇಲ್ಲ. ಕಾನೂನಿನ ಯಾವುದೇ ಮಾನ್ಯತೆಯನ್ನೂ ಹೊಂದಿರದೆ ಡಿಜಿಟಲ್ ವಹಿವಾಟಿನ ಕೊಡುಕೊಳು ವ್ಯವಹಾರಗಳಲ್ಲಿ ಕರೆನ್ಸಿ ಸ್ವರೂಪದಲ್ಲಿ ಬಳಕೆಯಾಗುವ ಮಾಧ್ಯಮ ಇದು. ಅದನ್ನೇ ವರ್ಚುವಲ್ (ವಾಸ್ತವವೆಂಬ ಭ್ರಮೆ ಮೂಡಿಸುವ) ಕರೆನ್ಸಿ ಅಥವಾ ಕ್ರಿಪ್ಟೋಕರೆನ್ಸಿ ಎನ್ನುವುದು.

ಸಂಪತ್ತಿನ ಕ್ರೋಡೀಕರಣದ ಈ ಹೊಸ ಬಗೆಯ ಡಿಜಿಟಲ್ ಸಾಧನವು 21ನೇ ಶತಮಾನದ ಸೃಷ್ಟಿ. ಸ್ವಿಟ್ಜರ್ಲೆಂಡ್, ಥಾಯ್ಲೆಂಡ್, ಜಪಾನ್, ಕೆನಡಾದಂತಹ ರಾಷ್ಟ್ರಗಳಲ್ಲಿ ಕ್ರಿಪ್ಟೋಕರೆನ್ಸಿಯ ಡಿಜಿಟಲ್ ಚಲಾವಣೆ ಪ್ರವರ್ಧಮಾನಕ್ಕೆ ಬಂದ ಬಳಿಕ ಭಾರತದಲ್ಲೂ ಅದು ತನ್ನ ಹೆಜ್ಜೆ ಗುರುತನ್ನು ಮೂಡಿಸಿತು. ಎರಡು ವರ್ಷಗಳ ಹಿಂದೆ ಈ ವಹಿವಾಟು ಇನ್ನೇನು ವೇಗ ಪಡೆದುಕೊಳ್ಳಲಿದೆ ಎನ್ನುವಾಗಲೇ ಭಾರತೀಯ ರಿಸರ್ವ್ ಬ್ಯಾಂಕ್, ಈ ಕರೆನ್ಸಿಯ ವಹಿವಾಟಿನ ಮೇಲೆ ನಿಷೇಧ ಹೇರಿತು. ಆ ನಿಷೇಧವನ್ನೇನೋ ಸುಪ್ರೀಂ ಕೋರ್ಟ್ ಈಗ ತೆರವುಗೊಳಿಸಿದೆ. ಆದರೆ, ಕ್ರಿಪ್ಟೋಕರೆನ್ಸಿಯ ಭವಿಷ್ಯದ ಕುರಿತು ಪ್ರಶ್ನೆಗಳು ಮಾತ್ರ ಹಾಗೇ ಉಳಿದಿವೆ.

ಆಯಾ ದೇಶದ ಕರೆನ್ಸಿಗಳು ಸಂಪೂರ್ಣ ಕೇಂದ್ರೀಕೃತ ವ್ಯವಸ್ಥೆಯ ಅಧೀನಕ್ಕೆ ಒಳಪಟ್ಟರೆ, ಕ್ರಿಪ್ಟೋಕರೆನ್ಸಿ ಖಾಸಗಿ ಕಂಪನಿಗಳ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಹರಿದು ಹಂಚಿಹೋಗಿದೆ. ಕ್ರಿಪ್ಟೋಕರೆನ್ಸಿಯ ಡಿಜಿಟಲ್ ಖಾತೆದಾರನ ವಿವರ ಆತನ ಒಂದು ವಿಳಾಸವಾಗಿರುತ್ತದೆ ಅಷ್ಟೆ. ಅದೂ ಗೂಢಲಿಪಿಯಲ್ಲಿ ಇರುತ್ತದೆ. ಹೀಗಾಗಿ ಗ್ರಾಹಕ ಯಾರು ಎಂಬ ಮಾಹಿತಿ ಗೌಪ್ಯವಾಗಿರುತ್ತದೆ. ಬ್ಲಾಕ್‌ಚೈನ್ (ಬೇರೆ, ಬೇರೆ ದೇಶಗಳಲ್ಲಿರುವ ಖಾಸಗಿ ಕಂಪನಿಗಳ ಕಂಪ್ಯೂಟರ್ ಜಾಲ) ನಿರ್ವಾಹಕರು ಈ ಕರೆನ್ಸಿಯ ವಹಿವಾಟನ್ನು ನೋಡಿಕೊಳ್ಳುತ್ತಾರೆ. ಆದ್ದರಿಂದಲೇ ಇದನ್ನು ಜಾಲದೊಳಗಿನ ಗಂಟು ಎಂದು ಕರೆಯಲಾಗುತ್ತದೆ.

ಅಕ್ರಮ ಸಂಪತ್ತನ್ನು ಕ್ರಿಪ್ಟೋಕರೆನ್ಸಿ ರೂಪದಲ್ಲಿ ಶೇಖರಣೆ ಮಾಡುವ ಸಾಧ್ಯತೆ ಇದೆ ಎಂದು ಜಾರಿ ನಿರ್ದೇಶನಾಲಯದಂತಹ ತನಿಖಾ ಸಂಸ್ಥೆಗಳು ಭೀತಿ ವ್ಯಕ್ತಪಡಿಸಿವೆ. ಮುಖ್ಯವಾಹಿನಿಯ ಹಣಕಾಸು ವ್ಯವಸ್ಥೆಯಲ್ಲಿ ದೇಶದ ಕರೆನ್ಸಿಗೆ ಪರ್ಯಾಯವಾಗಿ ಈ ಕ್ರಿಪ್ಟೋಕರೆನ್ಸಿಯನ್ನು ನೇರವಾಗಿ ಬಳಕೆ ಮಾಡಲು ಸಾಧ್ಯವಿಲ್ಲ ಎಂಬ ವಾದ ಸಹ ಕೇಳಿಬಂದಿದೆ. ಈ ಮಧ್ಯೆ ಕೇಂದ್ರ ಹಣಕಾಸು ಸಚಿವಾಲಯವು ವರ್ಚುವಲ್ ಕರೆನ್ಸಿ ಕುರಿತು ಅಧ್ಯಯನ ನಡೆಸಿ ವರದಿ ಕೊಡಲು ರಚಿಸಿದ್ದ ಸಮಿತಿ, ‘ಪ್ರಭುತ್ವಕ್ಕೆ ಹೊರತಾದ ಸಂಸ್ಥೆಗಳು ಸೃಷ್ಟಿಸಿದ ಈ ಕ್ರಿಪ್ಟೋಕರೆನ್ಸಿಗೆ ಯಾವುದೇ ವಿಶ್ವಾಸಾರ್ಹತೆ ಇಲ್ಲ. ಅದನ್ನು ಸಂಪೂರ್ಣವಾಗಿ ನಿಷೇಧಿಸಬೇಕು’ ಎಂದು ಶಿಫಾರಸು ಮಾಡಿದೆ.

ಡಿಜಿಟಲ್ ಯುಗದ ಸಾಧ್ಯತೆಯನ್ನು ಬಳಸಿಕೊಂಡು ಬೆಳೆದಿರುವ ಈ ಹಣಕಾಸು ವ್ಯವಸ್ಥೆಗೆ ಲಗಾಮು ಹಾಕುವ ಅವಶ್ಯಕತೆ ಇಲ್ಲ. ಭಾರತದಲ್ಲಿ ಸದ್ಯ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಕ್ರಿಪ್ಟೋಕರೆನ್ಸಿಯ ಬಳಕೆಯನ್ನು ನಿರ್ಬಂಧಿಸುವುದಿಲ್ಲ. ಹೀಗಾಗಿ ಅದರ ಮೇಲೆ ನಿಷೇಧ ಹೇರುವುದು ತರವಲ್ಲ ಎಂಬ ಪ್ರತಿವಾದವೂ ಕೇಳಿ ಬಂದಿದೆ. ಕೆಲವು ದೇಶಗಳು ಕ್ರಿಪ್ಟೋಕರೆನ್ಸಿಯ ನಿಯಂತ್ರಿತ ವಹಿವಾಟಿಗೆ ಅವಕಾಶ ಮಾಡಿಕೊಟ್ಟಿವೆ. ಭಾರತದಲ್ಲಿ ಈ ವಹಿವಾಟಿನ ಭವಿಷ್ಯದ ಕುರಿತ ನಿರ್ಧಾರ ತಂತಿಯ ಮೇಲಿನ ನಡಿಗೆ ಎನ್ನುವುದಂತೂ ಸುಳ್ಳಲ್ಲ.

■ ಪ್ರವೀಣ ಕುಲಕರ್ಣಿ